ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ::	1341
ಸದಸ್ಯರ ಹೆಸರು ::	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ ::	09.03.2022
ಉತ್ತರಿಸುವ ಸಚಿವರು ::	ಕಂದಾಯ ಸಚಿವರು

.ಸಂ	ಪ್ರಶ್ನೆ	ಉತ್ತರ
ಅ)	ಔರಾದ ತಾಲ್ಲೂಕಿನಲ್ಲಿ 2020-21ನೇ ಸಾಲಿನಲ್ಲಿ ಸ.ನಂ.183ರಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ವಸತಿ ನಿವೇಶನಕ್ಕಾಗಿ 2 ಎಕರೆ ಜಮೀನು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ: ಔರಾದ (ಬಿ) ತಾಲ್ಲೂಕಿನ ಔರಾದ (ಬಿ) ಗ್ರಾಮದ ಸರ್ಕಾರಿ ಗಾಯರಾಣ ಜಮೀನು ಸರ್ವೆ ನಂ.183/* ರಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ನಿವೇಶನಕ್ಕಾಗಿ ಜಮೀನು ಕಾಯ್ದಿರಿಸಲಾಗಿದೆ.
ಆ)	ಇದ್ದರೆ, ಸಾಕಷ್ಟು ಸಮಯವಾಗಿದ್ದರೂ ಈ ಭೂಮಿಯನ್ನು ಹದ್ದು ಬಸ್ತು ಮಾಡಿ ಹಿಂದುಳಿದ ವರ್ಗಗಳ ಇಲಾಖೆಗೆ ಪರಭಾರೆ ಮಾಡದಿರಲು ಕಾರಣವೇನು;	ಅಲೆಮಾರಿ ಜನಾಂಗದವರಿಗೆ ನಿವೇಶನಕ್ಕಾಗಿ ಕಾಯ್ದಿರಿಸಲಾಗಿದೆ ಎಂದು ಪಹಣಿ ಕಾಲಂ ನಂ.9 ರಲ್ಲಿ ನಮೂದಿಸಲಾಗಿರುತ್ತದೆ.
ಇ)	ಪರಭಾರೆ ಮಾಡುವುದಾದರೆ ಯಾವ ಕಾಲಮಿತಿಯೊಳಗೆ ಇಲಾಖೆಗೆ ಹಸ್ತಾಂತರಿಸಲಾಗುವುದು?	ಪ್ರಶ್ನೆ ಉದ್ಭವಿಸುವುದಿಲ್ಲ.

ಆರ್‌ಡಿ 7 ಎಲ್‌ಜಿಐ 2022

(ಆರ್.ಅಶೋಕ)
ಕಂದಾಯ ಸಚಿವರು